# ಮದುವೆಯ ಬೊಜ್ಜು ಕರಗಿತೆ?



ಮದುವೆ ಎನ್ನುವುದು ಅನೇಕ ಕುಟುಂಬಗಳ ಪಾಲಿಗೆ ತಮ್ಮನ್ನು ತಾವು ಸಾಲಕ್ಕೆ ಒಪ್ಪಿಸಿಕೊಳ್ಳುವ ಒಂದು ಸಾಮಾಜಿಕ ಸಂದರ್ಭ. ಹಿರಿಯರು ಮಾತ್ರವಲ್ಲ, ವಧುವರರು ಕೂಡ ತಮ್ಮ ವಿವಾಹದ ಸಾಲದ ಬಾಧ್ಯಸ್ಥರಾದಾಗ, ಅವರ ಪಾಲಿಗೆ ಮದುವೆಯಲ್ಲಿನ 'ಮಧು'ವೇ ಕಹಿಯಾಗುವ ಸಾಧ್ಯತೆಗಳೂ ಇವೆ. ವಿವಾಹ ಕಾರ್ಯಕ್ರಮಕ್ಕೆ ತಳಕು ಹಾಕಿಕೊಂಡ ಈ ಬೊಜ್ಜನ್ನು ಕೊರೊನಾ ಸಂದರ್ಭ ತಕ್ಕಮಟ್ಟಿಗೆ ಕರಗಿಸಿದೆ. ಜನ ಗುಂಪುಗೂಡಲು ಅವಕಾಶವೇ ಇಲ್ಲವಾದ್ದರಿಂದ ಮದುವೆಗಳ ಸಾರ್ವಜನಿಕ ಸಂಭ್ರಮ ಕೌಟುಂಬಿಕ ಹಾಗೂ ಖಾಸಗಿ ಚಟುವಟಿಕೆಯಾಗುವ ಅನಿವಾರ್ಯತೆಯನ್ನು ಕೊರೊನೊ ಸೃಷ್ಟಿಸಿದೆ. ಮದುವೆಗಳು ಸರಳವಾಗುವ ಮೂಲಕ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಆರ್ಥಿಕ ಹೊರೆ ತಗ್ಗಿತೆಂದು ಸಂತೋಷಪಡುವಂತಿಲ್ಲ. ಈ 'ಸರಳತೆಯ ಸೌಂದರ್ಯ'ಕ್ಕೆ ಸಮಾಜ ಎಷ್ಟು ಕಾಲ ಬದ್ಧವಾಗಿರುತ್ತದೆಂದು ಹೇಳಲಾಗದು. ಸರಳ ಮದುವೆಗಳ ಕಾರಣದಿಂದ, ವಿವಾಹದ ಅದ್ದೂರಿತನದೊಂದಿಗೆ ಬದುಕು ಕಟ್ಟಿಕೊಂಡಿದ್ದ ಅನೇಕರು ಕೆಲಸವಿಲ್ಲದೆ ಕೂತಿದ್ದಾರೆ. ಒಂದಂತೂ ನಿಜ, ಬದುಕಿನ ಕುರಿತಾದ ನಮ್ಮ ನಂಬಿಕೆಗಳನ್ನೇ ಬುಡಮೇಲು ಮಾಡಿರುವ 'ಕೊರೊನಾ' ವೈರಾಣು, ಮದುವೆಗಳ ಸ್ವರೂಪದ ಬಗ್ಗೆ ಪುನರ್ ವಿಮರ್ಶಿಸಲು ಒತ್ತಾಯಿಸುತ್ತಿದೆ.

■ ಪ್ರವೀಣ ಕುಲಕರ್ಣಿ